ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 82-89
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಹರಿದಾಸರ ಕೀರ್ತನೆಗಳಲ್ಲಿ ರಸಾಲಂಕಾರ ವಿವೇಕ

**ಡಾ. ತಿಪ್ಪೇರುದ್ರಯ್ಯ ಸಿದ್ಧಯ್ಯ ಮಠದ**
ಚಿಕ್ಕಯಡಚಿ, ರಟ್ಟೀಹಳ್ಳಿ ತಾಲೂಕು, ಹಾವೇರಿ ಜಿಲ್ಲೆ.

**Abstract:**
*ಹರಿದಾಸರ ಕೀರ್ತನೆಗಳು ಮಧ್ಯಕಾಲೀನ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ತಮ್ಮದೇ ಆದ ಮಹತ್ವವನ್ನು ಮೂಡಿಸಿ ಇಂದಿಗೂ ಜೀವಂತ ಸಾಹಿತ್ಯವಾಗಿ ಉಳಿದುಕೊಂಡಿವೆ. ಇದಕ್ಕೆ ಕಾರಣ ಅಂದು ಹರಿದಾಸರು ವಚನಕಾರರಂತೆ ಜನರಿಗೆ ಅರ್ಥವಾಗುವ ರೀತಿಯಲ್ಲಿ ಸರಳ ಹಾಗೂ ಆಡುಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿ ಸಮಾಜದಲ್ಲಿನ ಅಂಕು-ಡೊಂಕುಗಳನ್ನು ತಿದ್ದುವ ಪ್ರಯತ್ನ ಮಾಡಿದ್ದು. ಜೊತೆಗೆ ಆ ಕೀರ್ತನೆಗಳಲ್ಲಿ ಅನೇಕ ಸಾಹಿತ್ಯಿಕ ಅಂಶಗಳನ್ನು ತುಂಬಿ ಜನರ ಮಧ್ಯದಲ್ಲಿ ರಾಗ-ತಾಳಗಳಿಂದ ಹಾಡುತ್ತ ಜನಪ್ರಿಯರಾದರು. ಪ್ರಾಚೀನ ಕಾವ್ಯಗಳಂತೆ ಹರಿದಾಸರ ಕೀರ್ತನೆಗಳಲ್ಲೂ ರಸ, ವರ್ಣನೆ, ಅಲಂಕಾರ ಮುಂತಾದ ಅಂಶಗಳ ಕುರಿತು ನಡೆದ ಅಧ್ಯಯನಗಳನ್ನು ವಿವಿಧ ವಿದ್ವಾಂಸರು ಹಾಗೂ ಅಧ್ಯಯನಕಾರರ ವಿಶ್ಲೇಷಣೆಯೊಂದಿಗೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯ, ಹರಿದಾಸರ ಕೀರ್ತನೆಗಳು, ರಸಾಲಂಕಾರ.*

## ಪೀಠಿಕೆ

ಭಕ್ತಿ ಪಂಥದಲ್ಲಿ ಗುರುತಿಸಿಕೊಂಡ ಕೀರ್ತನ ಸಾಹಿತ್ಯವು ಹಲವು ರಸಗಳನ್ನು ಒಳಗೊಂಡು ರಚನೆಯಾಗಿರುವುದರ ಕುರಿತು ಅಧ್ಯಯನಗಳು ನಡೆದಿವೆ. "ಜೀವನ್ಮುಕ್ತನ ಪರಮಾನಂದಾನುಭವವನ್ನು ಶಾಸ್ತ್ರಕಾರರು 'ರಸ' ಎಂದು ಕರೆಯುತ್ತಾರೆ"[1] ರಜೋಗುಣ, ತಮೋಗುಣ ಮಿಶ್ರಣವಿಲ್ಲದ ಕೇವಲ ಶುದ್ಧ ಮನಸ್ಸಿಗೆ ಸಂಬಂಧಪಟ್ಟ ಭಾವೋದ್ರೇಕಕ್ಕೆ ರಸ ಎಂದು ಕರೆಯುತ್ತಾರೆ. ರಸವು ಶಬ್ದಗಳಿಂದ ಪೂರ್ತಿಯಾಗಿ ಬಣ್ಣಿಸಲು ಬರುವುದಿಲ್ಲ. ರಸಗಳು ತರಂಗಗಳಂತೆ ಹೊರಹೊಮ್ಮುವುದನ್ನು ಕಂಡು ಲೌಖಿಕ ಅನುಕೂಲಕ್ಕಾಗಿ ಸ್ಥಾಯಿ, ವ್ಯಭಿಚಾರಿ ಎಂದು ಕರೆಯುತ್ತಾರೆ. ಇಂತಹ ರಸಗಳಲ್ಲಿ ರಚನೆಯಾದ ಹರಿದಾಸರ ಕೀರ್ತನೆಗಳನ್ನು ಬೇಲೂರು ಕೇಶವದಾಸರು ತಮ್ಮ 'ಶ್ರೀ ಹರಿದಾಸ ಸಾಹಿತ್ಯ ವಿಮರ್ಶೆ' (1944) ಕೃತಿಯಲ್ಲಿ ಸವಿವರವಾಗಿ ಚರ್ಚಿಸಿದ್ದಾರೆ.

ಹರಿದಾಸರ ಕೀರ್ತನೆಗಳು ಶೃಂಗಾರರಸ, ವೀರರಸ, ಕರುಣಾರಸದಲ್ಲಿ ಭಕ್ತಿಯು, ವಿರಹವು, ಆರ್ತಭಾವವು ಒಂದಕ್ಕೊಂದು ಹೊಂದಿಕೊಂಡು ಬಂದ ಬಗೆಯನ್ನು ಅದ್ಭುತರಸದಲ್ಲಿ ಯಾವುದು ಆಗಲು ಸಾಧ್ಯವಿಲ್ಲವೋ ಅದು ಆಗು ಮಾಡಿದ ಶ್ರೀ ಕೃಷ್ಣನ ಕೀರ್ತನೆಗಳನ್ನು ಉಲ್ಲೇಖಿಸಿದ್ದಾರೆ. ಆ ಮೂಲಕ ವೀರಭದ್ರನ ರಣವೈಖರಿಯನ್ನು ವರ್ಣಿಸುವಾಗ ಹರಿದಾಸರು ಮೈಮರೆತು ಅದ್ಭುತದ ಎಲ್ಲೆಯನ್ನು ದಾಟಿ ಭಯಾನಕದ ಷಡ್ಜವನ್ನು ಮುಟ್ಟಿ, ಹಾಸ್ಯರಸದಲ್ಲಿ ಹರಿದಾಸರ ಕೀರ್ತನೆಗಳು ಮೂಡಿಬಂದ ಬಗೆಯನ್ನು ಚಿತ್ರಿಸಿದ್ದಾರೆ. ಹೀಗೆ ಭಯಾನಕ ರಸದಲ್ಲಿ, ಭೀಬತ್ಸರಸದಲ್ಲಿ, ರೌದ್ರರಸದಲ್ಲಿ,

***Please cite this article as:*** ತಿಪ್ಪೇರುದ್ರಯ್ಯ ಸಿದ್ಧಯ್ಯ ಮಠದ. (2023). ಹರಿದಾಸರ ಕೀರ್ತನೆಗಳಲ್ಲಿ ರಸಾಲಂಕಾರ ವಿವೇಕ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 82–89.

ಶಾಂತರಸದಲ್ಲಿ ರಚನೆಯಾದ ಹರಿದಾಸರ ಕೀರ್ತನೆಗಳನ್ನು ಉಲ್ಲೇಖಿಸಿ ಬೇಲೂರು ಕೇಶವದಾಸರು ಚರ್ಚಿಸಿದ್ದಾರೆ. ಹೀಗೆ ಚರ್ಚಿಸುತ್ತಾ ಹರಿದಾಸರ ಕೀರ್ತನೆಗಳಲ್ಲಿ ಕಂಡುಬರುವ ಅಲಂಕಾರ, ವರ್ಣನೆ, ರಸಗಳ ಕುರಿತು ಹೀಗೆ ಹೇಳಿದ್ದಾರೆ.

"ದಾಸರ ಕೀರ್ತನ ಪದಗಳೊಂದನ್ನು ಓದುವಾಗಲೂ, ರಾಗ, ತಾಳಗಳಲ್ಲಿ, ಕಾಲಗತಿಗಳಲ್ಲಿ, ಓದುಗರು ಓದಿದರೆ–ಹಾಡಿದರೆ–ಸಾಹಿತ್ಯದ ಗಾಂಭೀರ್ಯ, ಶಬ್ಧಸಂಮೃದ್ಧಿ, ಅರ್ಥಪೂರ್ಣತೆ, ರಸಭಾವಗಳ ಅವಿರ್ಭಾವ, ಒಂದೊಂದು ಗೊತ್ತಾಗಿ ಆನಂದವಾಗುತ್ತದೆ. ಲಘುಮನಸ್ಸಿನಿಂದ ಹೊತ್ತು ಕಳೆಯಲೆಂದು ಹಾಳೆಗಳನ್ನು ಮಗುಚಿದರೆ ಅರ್ಥವಾಗುವುದಿಲ್ಲ"[2] ಎಂದು ಹೇಳಿದ್ದಾರೆ.

ಎ.ಆರ್. ಕೃಷ್ಣಶಾಸ್ತ್ರೀ ಅವರು ತಮ್ಮ "ಭಾಷಣಗಳು ಮತ್ತು ಲೇಖನಗಳು" ಸಂಪುಟ–2ರಲ್ಲಿ ದಾಸರ ಕೀರ್ತನೆಗಳಲ್ಲಿ ಭಕ್ತಿರಸವು ವ್ಯಕ್ತವಾಗುವುದರ ಕುರಿತು ಮಾತನಾಡುತ್ತ "ಭಕ್ತಿಯು ಕಸವನ್ನು ರಸವತ್ತಾಗಿ ಮಾಡಬಲ್ಲದು. ಗೊಬ್ಬರವು ಗಿಡದಲ್ಲಿ ಸೇರಿ ಸುಂದರವಾದ ಹೂಗಳನ್ನು ಮಧುರವಾದ ಹಣ್ಣುಗಳನ್ನು ಬಿಡಿಸುತ್ತಿರುವ ಸ್ಥಿತಿಯಲ್ಲಿ ಅದನ್ನು ಗೊಬ್ಬರವೆಂದು ಅಲ್ಲಗಳೆಯಬಹುದೇ? ಹಾಗೆಯೇ ಕೀರ್ತನೆಗಳು ದುಃಖವನ್ನು ತಳ್ಳಿ ಸುಖವನ್ನು ತಂದು ಜನಜೀವನವನ್ನು ಉತ್ತಮಗೊಳಿಸುತ್ತಿದ್ದರೆ ಅವುಗಳಲ್ಲಿ ಕಾವ್ಯಗುಣವನ್ನೂ, ಪದಮೈತ್ರಿಯನ್ನೂ ಹುಡುಕುತ್ತ ಅವುಗಳನ್ನು ಅಲ್ಲಗಳೆಯುವುದು ಸರಿಯಲ್ಲ"[3] ಎಂದು ಅರ್ಥಪೂರ್ಣ ಮಾತುಗಳನ್ನಾಡಿದ್ದಾರೆ.

ಕೀರ್ತನ ಸಾಹಿತ್ಯದ ಅಧ್ಯಯನವನ್ನು ನಡೆಸಿದವರಲ್ಲಿ ಪ್ರಮುಖರೆನಿಸಿದ ಡಾ. ನಿ.ಕೃ. ರಾಮಶೇಷನ್ ಅವರ ಕೃತಿ "ಹರಿದಾಸ ಆಂದೋಲನ: ಒಂದು ಅಧ್ಯಯನ" ಇದೊಂದು ಪಿಎಚ್.ಡಿ ಮಹಾಪ್ರಬಂಧವೂ ಆಗಿದ್ದು ಇದರಲ್ಲಿ ಕನಕದಾಸರ ಕೀರ್ತನೆಗಳ ಸಾಹಿತ್ಯಶೈಲಿ, ವರ್ಣನೆ, ಅಲಂಕಾರಗಳ ಕುರಿತು ಈ ಕೆಳಗಿನಂತೆ ತಿಳಿಸಿದ್ದಾರೆ.

"ಕನಕದಾಸರ ಕೀರ್ತನೆಗಳಲ್ಲಿ ಅವರು ಬಳಸಿರುವ ಸಹಜ ದೇಸಿ, ಲೋಕಾನುಭವ, ಉಪಮೆಗಳಲ್ಲಿ ಸಹಜತೆ, ವರ್ಣಕ ಕಾವ್ಯಗಳಂತೆಯೂ ಕೆಲವು ಇವೆ. ಭಕ್ತನೊಬ್ಬ ಮುಕ್ತಿ ಪಡೆವ ಹಂಬಲದಿಂದ ಭಗವಂತನೊಂದಿಗೆ ನಡೆಸಿದ ಭಾವನಾತ್ಮಕ ಭಕ್ತಿ ಸಂಭಾಷಣೆಯೇ ಇವರ ಕೀರ್ತನೆಗಳ ವಸ್ತು. ಕನಕದಾಸರ ಕೀರ್ತನೆಗಳಲ್ಲಿ ಸಾಹಿತ್ಯ, ಸ್ತೋತ್ರ, ನಾಮಸಂಕೀರ್ತನೆ, ಆತ್ಮಶೋಧನೆ, ಸಮಾಜವಿಮರ್ಶೆ, ಲೋಕನೀತಿ, ಮಾದ್ವತತ್ವ–ರಾಮಾನುಜತತ್ವ ಎರಡರ ಬಗ್ಗೆ ಹೀಗೆ ಇವೆ ಭಾವನೆ, ಭಕ್ತಿ ಇಲ್ಲಿ ಪ್ರಧಾನ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಇರುವ ಕೀರ್ತನೆಗಳೂ ಉಂಟು. ಇಲ್ಲಿ ಒಂದು ಐತಿಹಾಸಿಕ ಅನುಮಾನ ಬರುವುದು. ಕನಕದಾಸರ ಕೀರ್ತನೆಗಳಲ್ಲಿ ವಿಠಲ ಭಕ್ತಿಯ ಮಾತು ಕೇಳಿಬಾರದಿರುವುದು. ಕನಕದಾಸರಲ್ಲಿ ಕಾಗಿನೆಲೆಯಾದಿ ಕೇಶವ, ಬಾಡದಾದಿಕೇಶವ, ಕಾಗಿನೆಲೆಯರಂಗ ಎಂದು ಅಂಕಿತಗಳು ಬಂದಿವೆ. ಅವರ ಕೀರ್ತನ ಕೃತಿಗಳಲ್ಲಿ ಸುತ್ತುಬಳಸಿ ನಾರಿಕೇಳಪಾಕವೇ ಹೆಚ್ಚು. ಏಕಾಂತ ಭಕ್ತಿ, ಧರ್ಮ, ನೀತಿ ಇವೆಲ್ಲ ದಾಸರು ಬೋಧಿಸಿದ್ದಾರೆ. ಡಂಬಾಚಾರ, ಡಾಂಭಿಕತೆ, ಸಂಕುಚಿತ ಪ್ರವೃತ್ತಿ ಖಂಡಿಸಿರುವುದೂ ಇದೆ. ದಾಸಕೂಟದ ಕ್ರಮದಂತೆ ದೇವತಾಸ್ತುತಿ, ನಾಮಸ್ಮರಣೆಯ ಕೀರ್ತನೆಗಳಿದ್ದರೂ ಹೆಚ್ಚು ಇಲ್ಲ. ಭಾವಾವೇಶ ಸಹಜವಾಗಿಯೆ ಇದೆ. ತಿಳಿಹಾಸ್ಯದ ಎಳೆ, ಕೀರ್ತನೆಗಳಲ್ಲೂ ಬರುವುದು ಸಹಜ"[4] ಎಂದು ಕನಕದಾಸರ ಕೀರ್ತನೆಗಳಲ್ಲಿ ಅಡಗಿರುವ ಸಾಹಿತ್ಯಿಕ ಅಂಶಗಳಾದ ಕೀರ್ತನೆಗಳ ವಸ್ತು, ಭಾಷೆ, ಸಾಹಿತ್ಯ, ವರ್ಣನೆ, ಇತಿಹಾಸ, ಅಂಕಿತ ವಿಶೇಷ, ಹಾಸ್ಯರಸ ಹೀಗೆ ಹಲವು ವಿಚಾರಗಳ ಕುರಿತು ಸಮಗ್ರವಾಗಿ ಚರ್ಚಿಸಿ ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ.

ಹರಿದಾಸರ ಕೃತಿಗಳು ಪ್ರಾಚೀನ ಕವಿಗಳಿಗಿಂತ ಭಿನ್ನರೂಪದ ಸಾಹಿತ್ಯಿಕ ಅಂಶಗಳನ್ನು ಒಳಗೊಂಡಿರುವಂತಹವು. ದಾಸರು ಕೀರ್ತನೆಗಳಲ್ಲಿ ಬಳಸಿರುವ ಅಲಂಕಾರ, ಉಪಮೆಗಳು ಪ್ರಾಚೀನ ಕವಿಗಳು

ಬಳಸಿದಂತೆ ಇಲ್ಲ. ಅವು ಲೋಕಾನುಭವದ ನಿಜವಾದ ಉಪಮೆಗಳು ಎಂದು ನಾ.ಕೃ. ರಾಮಶೇಷನ್ ಅವರು ತಮ್ಮ ಕೃತಿ 'ಹರಿದಾಸ ಆಂದೋಲನ: ಒಂದು ಅಧ್ಯಯನ'ದಲ್ಲಿ ಈ ರೀತಿ ಚರ್ಚಿಸಿದ್ದಾರೆ.

"ಹರಿದಾಸರ ಕೀರ್ತನೆಗಳು ಮೌಲ್ಯವುಳ್ಳವೆನ್ನಲು ಈ ಪರಂಪರೆಯಲ್ಲಿ ಬಂದ ದಾಸರು ಬಳಸಿರುವ ಉಪಮೆಗಳು ಕಾರಣವೆನಿಸುತ್ತದೆ. ಉಪಮೆ, ಅಲಂಕಾರ, ಶೈಲಿ, ಭಾಷೆಯ ಬಳಕೆ ಹಾಗೂ ಭಾಷೆಯ ಮೇಲಣ ಪ್ರಭುತ್ವ ಇವೆಲ್ಲ ಯಾವುದೇ ಕೃತಿಯ ಸಾಹಿತ್ಯಿಕ ಮೌಲ್ಯವನ್ನು ಹೇಗೆ ಅಳೆಯುತ್ತದೆಯೋ ಹಾಗೆಯೇ ಸಾಹಿತಿಯ, ಕವಿಯ, ಕೃತಿಕಾರನ ಪ್ರತಿಭೆ, ಅಂತಃಸತ್ವ ದ್ಯೋತಕ. ಹರಿದಾಸರ ಉಪಮೆಗಳು ಕೇವಲ ಕವಿಲೋಕದ ಕಲ್ಪನೆಯಲ್ಲ, ಕವಿಸಮಯದ ಹೋಲಿಕೆಗಳೂ ಅಲ್ಲ, ಅವರದ್ದೇ ಲೋಕಾನುಭವ ಟಂಕಿಸಿದ ನಿಜವಾದ ಉಪಮೆಗಳು. ದೈನಂದಿನ ಬದುಕಿನಿಂದ, ಪೌರಾಣಿಕ ಪ್ರಜ್ಞೆ–ಭಾಗವತ ಪ್ರಜ್ಞೆಗಳಿಂದ ಒಡಮೂಡಿ ಬಂದ ಮೌಕ್ತಿಕ ಅವು."[5] ಎಂದು ಕವಿಗಳು ಬಳಸಿರುವ ಉಪಮೆ, ಅಲಂಕಾರಗಳಿಗೂ, ದಾಸರು ಕೀರ್ತನೆಗಳಲ್ಲಿ ಬಳಸಿರುವ ಅಲಂಕಾರ, ಉಪಮೆಗಳಿಗೂ ಇರುವ ವ್ಯತ್ಯಾಸವನ್ನು ಅತಿ ಸೂಕ್ಷ್ಮವಾಗಿ ಅಧ್ಯಯನ ಮಾಡಿ ದಾಸರು ಬಳಸಿದ ಅಲಂಕಾರ, ಉಪಮೆಗಳು ಕವಿಗಳು ಬಳಸಿದ ಅಲಂಕಾರಗಳಿಗಿಂತ ಭಿನ್ನ ಮತ್ತು ಅವು ವಾಸ್ತವ ಜಗತ್ತಿಗೆ ಹತ್ತಿರವಾದವು ಎಂದು ತಿಳಿಸಿದ್ದಾರೆ.

"ನವರಸದಲ್ಲಿ ಒಂದಾದ ಶೃಂಗಾರ ರಸವೇ ಭಕ್ತಿ ರಸವಾದುದರಿಂದ ದಾಸರು ಕೇವಲ ಪರಮಾತ್ಮನಲ್ಲಿ ನವವಿಧ ಭಕುತಿಯ ರೂಪವಾಗಿ ಬಳಸಿಕೊಂಡು ತಮ್ಮ ಕೀರ್ತನೆಗಳಲ್ಲಿ ಭಗವಂತನ ಅನಂತಗುಣ ರೂಪಕ್ರಿಯೆಗಳನ್ನು ದ್ವಂದ್ವಾರ್ಥದಲ್ಲಿ ದಿಗ್ದರ್ಶಿಸಿದ್ದಾರೆ. ಗೋಪಿಯರೊಡನೆ ರಾಸಕ್ರೀಡೆಯಾಡಿದ ಕೃಷ್ಣನ ಶೃಂಗಾರ ರಸವನ್ನು ದಾಸರು ತಮ್ಮ ಅಂತಃಚಕ್ಷುವಿನಿಂದ ಕಂಡು ಬಹು ಸ್ವಾರಸ್ಯವಾಗಿ ಭಾವುಕ ರಸಿಕರಿಗೆ ತೃಪ್ತಿಯಾಗುವಂತೆ ವರ್ಣಿಸಿದ್ದಾರೆ"[6] ಎಂದು ಶ್ರೀ ಪ್ರಹ್ಲಾದಾಚಾರ್ಯ ಜೋಷಿ ಅವರು "ದಾಸಸಾಹಿತ್ಯದಲ್ಲಿ ಶೃಂಗಾರ" ಎಂಬ ಲೇಖನದಲ್ಲಿ ತಿಳಿಸಿರುವ ಮಾತನ್ನು ಗಮನಿಸಿದರೆ ಹರಿದಾಸರುಗಳು ರಚಿಸಿರುವ ಕೀರ್ತನೆಗಳಲ್ಲಿ ಶೃಂಗಾರರಸಕ್ಕೆ ಸಂಬಂಧಿಸಿದಂತೆ ನೋಡುವುದಾದರೆ ಅದು ಶ್ರೀ ಕೃಷ್ಣ ಮತ್ತು ಗೋಪಿಕೆಯರ ನಡುವಿನ ಸಂಭಾಷಣೆಯನ್ನು ಕುರಿತ ಕೀರ್ತನೆಗಳು ಎಂಬುದು ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ.

ಶ್ರೀ ಪ್ರಹ್ಲಾದಾಚಾರ್ಯ ಜೋಷಿ ಅವರು ಹರಿದಾಸರುಗಳ ಕೆಲವು ಕೀರ್ತನೆಗಳನ್ನು ಉಲ್ಲೇಖಿಸಿ ಕೀರ್ತನೆಗಳಲ್ಲಿ ಅಡಗಿರುವ ಶೃಂಗಾರ ರಸವನ್ನು ತಿಳಿಸುವ ಪ್ರಯತ್ನ ಮಾಡಿರುವುದನ್ನು ಕಾಣುತ್ತೇವೆ. ಇಲ್ಲಿ ಶ್ರೀಕೃಷ್ಣ–ಗೋಪಿಕೆಯರ ನಡುವಿನ ಸರಸಕ್ಕೆ ಸಂಬಂಧಿಸಿದ ಕೀರ್ತನೆಗಳು ಶ್ರೀಕೃಷ್ಣನ ಕೀಟಲೆಗಳಿಂದ ಬೇಸತ್ತು ಅವನ ತಾಯಿಯಲ್ಲಿ ದೂರು ನೀಡುವ ಗೋಪಿಕೆಯರ ಹಲವು ಕೀರ್ತನೆಗಳಲ್ಲಿ ಶೃಂಗಾರ ರಸ ಕಂಡುಬಂದಿರುವುದನ್ನು ಸಂದರ್ಭೋಚಿತವಾಗಿ ವಿವರಿಸುವ ಪ್ರಯತ್ನ ಮಾಡಿದ್ದಾರೆ.ಕೃಷ್ಣನೊಡನೆ ಏಕಾಂತದಲ್ಲಿ ಸರಸವಾಡಲು ಮನಸಿದ್ದ ಗೋಪಿಕೆಯು ಬಹುಶೃಂಗಾರದಿಂದ ಅಲಂಕೃತಳಾಗಿ ಆತನಿಗಾಗಿ ದಾರಿಕಾಯುತ್ತ ಹಾಲು ಕಾಯಿಸುವ ಸಮಯದಲ್ಲಿ ಶ್ರೀಕೃಷ್ಣನೇ ಬಂದು ಸರಸವಾಡುವ ಸಂಕೀರ್ತನೆಯನ್ನೂ ಇಲ್ಲಿ ಉಲ್ಲೇಖಿಸಿ ವಿವರಿಸಿದ್ದಾರೆ. ಹೀಗೆ ಇನ್ನೂ ಅನೇಕ ಇಂಥ ಶೃಂಗಾರ ರಸದ ಸಂವಾದರೂಪದ ಶ್ರೀಕೃಷ್ಣ ಗೋಪಿಕೆಯರ ಮಾತುಗಳು ಬಹು ಮಾರ್ಮಿಕವಾಗಿ ಹಾಗೂ ಅರ್ಥಗರ್ಭಿತವಾಗಿದ್ದು ನಮ್ಮ ನವಚೈತನ್ಯ ತುಂಬಿ ತುಳುಕಿಸುವಂತೆ ಮಾಡುತ್ತದೆ. "ಇದೇ ಶೃಂಗಾರ ಹರಿಯುತ್ತ ತಿರುಗಿದರೆ ಅದೇ ಭಕ್ತಿ ಎನಿಸಿ ಜನ್ಮ ಸಫಲವಾಗುತ್ತದೆ"[7] ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಹರಿದಾಸರುಗಳು ತಮ್ಮ ಕೀರ್ತನೆಗಳಲ್ಲಿ ರಾಮಾಯಣದ ಪೌರಾಣಿಕ ಅಂಶಗಳನ್ನು ಸಹ ಉಲ್ಲೇಖಿಸಿ ಕೀರ್ತನೆಗಳನ್ನು ರಚಿಸಿದ್ದಾರೆ. ಇಂತಹ ರಾಮಾಯಣದ ಪ್ರಮುಖ ವ್ಯಕ್ತಿಚಿತ್ರವೆಂದರೆ ಅದು ಶ್ರೀರಾಮ. ಈ ಶ್ರೀರಾಮನ ಕುರಿತು ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಅಲಂಕಾರಿಕವಾಗಿ ವರ್ಣಿಸಿರುವುದನ್ನು ಕಾಣುತ್ತೇವೆ. ಇಂತಹ ದಾಸರ ಕೀರ್ತನೆಗಳಲ್ಲಿ ಶ್ರೀರಾಮನನ್ನು ಕುರಿತು ಅಲಂಕಾರಿಕವಾಗಿ ಕೀರ್ತನೆಗಳನ್ನು ರಚಿಸಿರುವುದರ ಕುರಿತು ಡಾ. ಕೆ. ಸರ್ವೋತ್ತಮನ್ ಅವರು ಸಪ್ತಗಿರಿ ಮಾಸಪತ್ರಿಕೆ 1982ರ ಜನವರಿ ಸಂಚಿಕೆಯ "ದಾಸರ ಕೃತಿಗಳಲ್ಲಿ ಶ್ರೀರಾಮ" ಎನ್ನುವ ಲೇಖನ ಇಲ್ಲಿ ಉಲ್ಲೇಖನೀಯ. ಈ ಲೇಖನದಲ್ಲಿ ಲೇಖಕರು ಶ್ರೀರಾಮನ ನಾಮಮಹಿಮೆಯ ಕುರಿತು ಅಲಂಕಾರಿಕವಾಗಿ ಕೀರ್ತನೆಗಳನ್ನು ರಚಿಸಿರುವುದನ್ನು ಸ್ಪಷ್ಟವಾಗಿ ದಾಸರ ಕೀರ್ತನೆಗಳನ್ನು ಉಲ್ಲೇಖಿಸುವ ಮೂಲಕ ಈ ಕೆಳಗಿನಂತೆ ತಿಳಿಸಿದ್ದಾರೆ.

"ರಾಮನಾಮದ ಮಹಾತ್ಮ್ಯವನ್ನು ಅಲಂಕಾರಿಕವಾಗಿ ಹೇಳುವುದು ದಾಸರ ಮತ್ತೊಂದು ಪದ್ಧತಿ. 'ರಾಮನಾಮ ಪಾಯಸಕ್ಕೆ' ಎನ್ನುವ ಕೀರ್ತನೆಯಲ್ಲಿ ಕೃಷ್ಣನಾಮವನ್ನು ಸಕ್ಕರೆಯಾಗಿ, ವಿಠ್ಠಲನಾಮವನ್ನು ತುಪ್ಪವಾಗಿ ಬಳಸಿಕೊಂಡಿದ್ದಾರೆ. ಅದೇ ರೀತಿ 'ರಾಮನಾಮ ರತ್ನಹಾರ ದೊರಕಿತು ಎನಗೆ' ಎನ್ನುವ ಕೀರ್ತನೆಯಲ್ಲಿ ದಶಾವತಾರಗಳ ಪ್ರಸ್ತಾವ ಮಾಡಿದ್ದಾರೆ. ಮತ್ತೊಂದು ಕೀರ್ತನೆಯಲ್ಲಿ 'ಶ್ರೀರಾಮನಾಮವೆಂಬೋ ಸಿಂಗಾಡಿ ತಕ್ಕೊಂಡು ಅರಿಷಡ್ವರ್ಗಗಳನ್ನು ವಧೆ ಮಾಡಬಹುದೆಂದು ಉಪಾಯ ಸೂಚಿಸುತ್ತಾರೆ. 'ಅವನಿಯೊಳು ಶ್ರೀರಾಮನೆಂಬೊ ಹಣ್ಣು ಕೊಳ್ಳಿರೊ' ಎನ್ನುವ ಕೀರ್ತನೆ ಅಲಂಕಾರಿಕವಾಗಿ ಹಾಡಿದ ಪದವಾಗುತ್ತದೆ"[8] ಎಂಬ ಡಾ. ಕೆ. ಸರ್ವೋತ್ತಮನ್ ಅವರ ಮಾತುಗಳಲ್ಲಿ ಹರಿದಾಸರುಗಳ ಶ್ರೀರಾಮನ ಕುರಿತು, ಅವನ ನಾಮಮಹಿಮೆಯ ಕುರಿತು ಅಲಂಕಾರಿಕವಾಗಿ ಹಾಡಿದ ಕೀರ್ತನೆಗಳ ಮಹತ್ವ ತಿಳಿಯುತ್ತದೆ.

ದಾಸರ ಕೀರ್ತನೆಗಳು ಎಲ್ಲ ರಸಗಳಲ್ಲೂ ಮೂಡಿ ಬಂದಿರುವುದನ್ನು ಕಾಣುತ್ತೇವೆ. ಈ ಎಲ್ಲ ರಸಗಳ ಉಲ್ಲೇಖಗಳನ್ನು ಹಲವು ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಆದರೆ ತುಂಬಾ ವಿರಳವಾಗಿ ಕಂಡುಬರುವ ಒಂದು ರಸವೆಂದರೆ ಅದು ಹಾಸ್ಯರಸ. ಹರಿದಾಸರು ಭಕ್ತಿಯನ್ನು, ಧರ್ಮಪ್ರಸಾರವನ್ನು, ಹರಿನಾಮಸ್ಮರಣೆಯನ್ನು, ವಿಡಂಬನೆಯನ್ನು ಮುಖ್ಯವಾಗಿರಿಸಿಕೊಂಡು ಹಲವು ರಸಗಳಲ್ಲಿ ಕೀರ್ತನೆಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಇಂತಹ ಸಂದರ್ಭದಲ್ಲಿ ಹರಿದಾಸರು ಹಾಸ್ಯರಸದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆಯೇ ಎಂಬ ಪ್ರಶ್ನೆ ನಮ್ಮ ಮನದಲ್ಲಿ ಮೂಡುವುದು ಸಹಜ. ಇದಕ್ಕೆ ಉತ್ತರವಾಗಿ ಶ್ರೀ ಪ್ರಾಣೇಶ ಗುಡಿ ಅವರು ಪುರಂದರದಾಸರ ಕೀರ್ತನೆಗಳಲ್ಲಿ ಹಾಸ್ಯರಸ ಮೂಡಿಬಂದಿರುವುದನ್ನು ಗುರುತಿಸಿದ್ದಾರೆ.

"ಪುರಂದರದಾಸರು ತಮ್ಮ ಅಸಂಖ್ಯಾತ ಕೀರ್ತನೆಗಳ ಮೂಲಕ ಜನ ಜೀವನದ ಎಲ್ಲ ಮುಖಗಳ ಒಳಹೊರಗುಗಳನ್ನು ಶೋಧಿಸಿ, 'ಅಲ್ಲ' ಅನಿಸಿದ್ದನ್ನು ನಿರ್ಭಿಡೆಯಿಂದ ಖಂಡಿಸಿ, 'ಹೌದು' ಎನಿಸಿದ್ದನ್ನು ಮುಕ್ತಕಂಠದಿಂದ ಹೊಗಳಿ ಹರಸಿದವರು. ಅವರ ಕೀರ್ತನೆಗಳಲ್ಲಿ ಭಕ್ತಿ, ಜ್ಞಾನ, ವೈರಾಗ್ಯ ಇವು ಹೇಗೆ ಸಮೃದ್ಧವಾಗಿ ಹೊರಹೊಮ್ಮಿವೆಯೋ ಹಾಗೆಯೇ ಹಾಸ್ಯ ವಿಡಂಬನೆಗಳು ಕೂಡ ಹಾಸುಹೊಕ್ಕಾಗಿ ಬಂದಿವೆ. ದಾಸರು ಕೆರಳಿದಾಗ ಯಾರನ್ನೂ ಬಿಡುವವರಲ್ಲ. ತಮ್ಮನ್ನು ತಾವೇ ವಿಡಂಬಿಸಿಕೊಳ್ಳುವುದರಿಂದ ಹಿಡಿದು ತಮ್ಮ ಆರಾಧ್ಯದೈವ ಪುರಂದರ ವಿಠಲನನ್ನು ಹಂಗಿಸುವುದರ ತನಕ ಪುರಂದರದಾಸರ ಲೇಖನಿ ಓಡಿದೆ"[9] ಎಂಬ ಶ್ರೀ ಪ್ರಾಣೇಶ ಗುಡಿ ಅವರ ಮಾತನ್ನು ಗಮನಿಸಿದರೆ ಉಳಿದ ಹರಿದಾಸರಿಗಿಂತ ಪುರಂದರದಾಸರಲ್ಲಿ ಹಾಸ್ಯ ವಿಡಂಬನೆ ಹೆಚ್ಚಾಗಿ ಕಂಡುಬಂದಿರುವುದು ತಿಳಿಯುತ್ತದೆ. ಈ ಲೇಖನದಲ್ಲಿ

ಸ್ವವಿಮರ್ಶೆ, ಡೊಂಕುಬಾಲದ ನಾಯಕರು, ಗೃಹಿಣಿಯ ಗೋಳು, ಹರಿಯೊಂದಿಗೆ ಮುನಿಸು ಮುಂತಾದ ಕೀರ್ತನೆಗಳನ್ನು ಉಲ್ಲೇಖಿಸುವ ಮೂಲಕ ಪುರಂದರದಾಸರು ಅತ್ಯುತ್ತಮ ಹಾಸ್ಯ ವಿಡಂಬನಕಾರ ಎಂಬುದನ್ನು ಲೇಖಕರು ನಿರೂಪಿಸಿದ್ದಾರೆ.

ಸುಳಾದಿಗಳನ್ನು ರಚಿಸಿ ಇಂದಿಗೂ ಚಿರಸ್ಥಾಯಿಯಾಗಿ ಉಳಿದಿರುವ ವಿಜಯದಾಸರ ಕೀರ್ತನೆಗಳಲ್ಲಿ ರಸಾಲಂಕಾರಗಳನ್ನು ಗುರುತಿಸುವ ಪ್ರಯತ್ನವನ್ನು ಶ್ರೀ ಚಿಂಚೋಳಿ ಪ್ರಹ್ಲಾದಾಚಾರ್ಯ ಅವರು 'ಶ್ರೀ ವಿಜಯದಾಸರು' ಎಂಬ ಅವರ ಲೇಖನದಲ್ಲಿ ಮಾಡಿದ್ದಾರೆ. ವಿಜಯದಾಸರ ಸಾಹಿತ್ಯದಲ್ಲಿ ವಿಶ್ವಸಾಹಿತ್ಯವೇ ತುಂಬಿದೆ. ವೇದ, ಉಪನಿಷತ್ತು, ಇತಿಹಾಸ, ಪುರಾಣ, ಅರ್ಥಶಾಸ್ತ್ರ, ಸಂಗೀತಶಾಸ್ತ್ರ, ವ್ಯಾಕರಣ, ಛಂದಸ್ಸು, ಅಲಂಕಾರಾದಿಗಳು ರಸಸ್ಥಾಯಿ, ಅಂಗ ಉಪಾಂಗ ರಸಾದಿಗಳಿಂದ ತುಂಬಿ ತುಳುಕಾಡುತ್ತಿವೆ. ಭಾಷಾ ಲಾಲಿತ್ಯ, ಭಾಷಾ ಪ್ರೌಢಿಮೆ, ಪ್ರಾಸ, ಅನುಪ್ರಾಸ, ಆದಿಮಧ್ಯ ಅಂತ್ಯಪ್ರಾಸಗಳು ಸೊಬಗಿನಿಂದ ಕೂಡಿವೆ. ಇವರ ಕೀರ್ತನೆಗಳಲ್ಲಿ ಜನಪದ ಸಾಹಿತ್ಯದ ಪ್ರಯೋಗವನ್ನು ಕಾಣುವುದರ ಜೊತೆಗೆ ಮುಖ್ಯವಾಗಿ ಪರಮಾತ್ಮನ ವರ್ಣನೆಯಲ್ಲಿ ನವರಸಾಲಂಕಾರಗಳಿವೆ ಎಂಬುದನ್ನು ಶ್ರೀ ಚಿಂಚೋಳಿ ಪ್ರಹ್ಲಾದಾಚಾರ್ಯ ಅವರು ತಿಳಿಸಿರುವುದನ್ನು ಈ ಕೆಳಗಿನಂತೆ ನೋಡಬಹುದು.

"ವಿಜಯದಾಸರ ಕೀರ್ತನೆಗಳಲ್ಲಿ ನವರಸ ಎತ್ತಿಕಾಣುತ್ತ ವಿರಾಜಿಸುತ್ತಲಿದೆ. ಕೃಷ್ಣನ ರಾಸಕ್ರೀಡೆ ವರ್ಣನೆಯಲ್ಲಿ ಶೃಂಗಾರಸವನ್ನು ನರಸಿಂಹ, ಭೀಮಸೇನ ದೇವರ ವರ್ಣನೆಯಲ್ಲಿ ವೀರ ರಸವನ್ನು, ಗೋಪಿಕಾಸ್ತ್ರೀಯರ ಭಕ್ತಿಯಲಿ ಕರುಣಾರಸವನ್ನು, ರಾಮಕೃಷ್ಣ, ಹನುಮ, ಭೀಮಾದಿಗಳ ಅವತಾರದಲ್ಲಿ ಅದ್ಭುತ ರಸವನ್ನೂ, ರಾವಣ ಹನುಮ ಸಂವಾದ, ಉರುಣಗೆ ಪದಗಳಲ್ಲಿ ಹಾಸ್ಯರಸವನ್ನು ಅಂತೆಯೇ ಅಲ್ಲಲ್ಲಿ ಭೀಬತ್ಸ, ವೀರ, ರೌದ್ರ, ಶಾಂತಾದಿ ರಸಮಯ ಕೀರ್ತನೆಗಳಿವೆ"[10] ಎಂಬ ಲೇಖಕರ ಮಾತುಗಳನ್ನು ಗಮನಿಸಿದರೆ ವಿಜಯದಾಸರು ಸಹ ಎಲ್ಲ ರಸಗಳಲ್ಲೂ ಕೀರ್ತನೆಗಳನ್ನು ರಚಿಸಿರುವುದು ಸ್ಪಷ್ಟವಾಗುತ್ತದೆ.

ಶ್ರೀ ಕೂಡಲಿ ಜಗನ್ನಾಥ ಶಾಸ್ತ್ರೀಗಳು "ಅಜ್ಞಾತ ದಾಸಶ್ರೇಷ್ಠ ಪರಮದೇವ" ಎಂಬ ಲೇಖನದಲ್ಲಿ ಪರಮದೇವನು ತನ್ನ ಕೀರ್ತನೆಗಳಲ್ಲಿ ಅಲಂಕಾರಗಳನ್ನು ಬಳಸಿರುವ ಬಗೆಗೆ ಹಾಗೂ ಬಳಸಿದ ಭಾಷೆಯ ಕುರಿತು ಚರ್ಚಿಸಿದ್ದಾರೆ. "ಪರಮದೇವನ ಕೀರ್ತನೆಗಳು ರಾಗ–ತಾಳಬದ್ಧವಾಗಿವೆ. ಇವು ಸಾಕಾರ ರೂಪದ ಭಗವಂತನ ವೈಭವವನ್ನು ವರ್ಣಿಸುತ್ತವೆ. ದೇವರುಗಳ ಅಂಗಾಂಗಗಳ, ಅಲಂಕಾರಗಳ ವರ್ಣನೆಯ ಮೂಲಕ ಆ ದಿವ್ಯ ಮಂಗಳ ರೂಪವನ್ನು ಕಣ್ಣುಮುಂದೆ ತಂದು ನಿಲ್ಲಿಸುವ ತನ್ಮೂಲಕ ಸರ್ವ ಸಮರ್ಪಣಾ ಭಾವವನ್ನು ಉಂಟುಮಾಡುವ ಶಕ್ತಿ ಇವನ ಕೀರ್ತನೆಗಳಲ್ಲಿ ಅಡಗಿದೆ. ಇವನ ಕೀರ್ತನೆಗಳಲ್ಲಿ ಕಿರಿದರಲ್ಲಿ ಪಿರಿದರ್ಥವನ್ನು ಸೆರೆಹಿಡಿಯುವ ಮೋಡಿ ಇದೆ; ಭಾವುಕತೆ ಇದೆ; ತನ್ಮಯತೆ ಇದೆ. ಅಷ್ಟೇ ಅಲ್ಲ, ಅಂದಿನ ಜನರ ದೈನಂದಿನ ವ್ಯವಹಾರಗಳ ಅಲಂಕಾರಗಳ ಚಿತ್ರಣವೂ ಇದೆ. ಇಲ್ಲಿನ ಭಾಷೆ ಸರಳ, ಮೋಹಕ."[11] ಎಂಬ ಲೇಖಕರ ಮಾತುಗಳನ್ನು ಗಮನಿಸಿದರೆ ಅಂದಿನ ಕಾಲಕ್ಕೆ ಅಜ್ಞಾತವಾಗಿದ್ದರೂ ಉತ್ತಮ ಅಲಂಕಾರ, ವರ್ಣನೆಗಳಿಂದ ಕೂಡಿದ ಕೀರ್ತನೆಗಳನ್ನು ಪರಮದೇವ ರಚಿಸಿರುವುದನ್ನು ತಿಳಿಯಬಹುದಾಗಿದೆ. ಇದೇ ಲೇಖನದಲ್ಲಿ ಪರಮದೇವನು ಕೀರ್ತನ ರಚಯಿತನಾದರೂ ದಂಡಕವನ್ನು ಬರೆದಿದ್ದಾನೆ ಎಂದು ಉಲ್ಲೇಖಿಸಿ ಅವನು ತನ್ನ ದಂಡಕವನ್ನು "ವಿಭೂತಿ ದಂಡಕ" ಎಂದು ಕರೆದಿದ್ದಾನೆ ಎಂದಿದ್ದಾರೆ.

ಉ.ಲ. ಹಯವದನ ಆಚಾರ್ಯ ಅವರು 'ವಾದಿರಾಜರ ಕೀರ್ತನೆಗಳಲ್ಲಿ ಮಧುರಭಾವ' ಎಂಬ ಲೇಖನದಲ್ಲಿ ಶ್ರೀವಾದಿರಾಜರ ಕೀರ್ತನೆಗಳ ವಸ್ತು,

ಅಲಂಕಾರ, ವರ್ಣನೆ, ಶೃಂಗಾರರಸದ ಕುರಿತು ಬರೆದ ಕೀರ್ತನೆಗಳನ್ನು ಉದಾಹರಿಸುತ್ತ "ವಾದಿರಾಜರ ಕೀರ್ತನೆಗಳಲ್ಲಿ ದಾಸ್ಯ, ಆರ್ತಭಾವಗಳೇ ಪ್ರಧಾನವಾಗಿದ್ದರೂ ಅವರ ಕಾವ್ಯ ಪ್ರತಿಭೆ ಪ್ರಕಟವಾಗುವುದು ಅವರ ಮಧುರ ಭಾವದ ಕೀರ್ತನೆಗಳಲ್ಲಿ. ಶೃಂಗಾರ ಅಥವಾ ಮಧುರಭಾವ ದಾಸಸಾಹಿತ್ಯದಲ್ಲಿ ಭಕ್ತಿಯ ಒಂದು ವಾಹಕವಾಗಿ ಪ್ರಕಟಗೊಳ್ಳುತ್ತದೆ. ಭಕ್ತ ತನ್ನನ್ನು ಸತಿ, ತನ್ನ ದೇವನನ್ನು ಪತಿ ಎಂದು ಆರೋಪಿಸಿಕೊಂಡು ತನ್ನ ಅಂತರಂಗದ ಭಕ್ತಿಯನ್ನು ತೋಡಿಕೊಳ್ಳುತ್ತಾನೆ. ವಾದಿರಾಜರ ಕೀರ್ತನೆಗಳಲ್ಲಿ ಕೃಷ್ಣ ಗೋಪಿಯರ ಚಿತ್ರಣದ ಮೂಲಕ ಮಧುರಭಾವದ ಶೃಂಗಾರ ರಸದ ಕೀರ್ತನೆಗಳು ಪ್ರಕಟವಾಗಿವೆ"[12] ಎಂದಿದ್ದಾರೆ.

ಪುರಂದರದಾಸರು ಶ್ರೀ ಕೃಷ್ಣನ ಬಾಲಲೀಲೆಯನ್ನು ಕುರಿತು ಹಲವು ಕೀರ್ತನೆಗಳನ್ನು ರಚಿಸಿದ್ದಾರೆ. ಇವರು ಸುಮಾರು ಎಪ್ಪತ್ತಾರು ಕೀರ್ತನೆಗಳನ್ನು ಕೃಷ್ಣನ ಬಾಲಲೀಲೆಗೆ ಸಂಬಂಧಿಸಿದಂತೆ ರಚಿಸಿರುವರು ಎಂದು ಡಾ. ಕೆ. ಗೋಕುಲನಾಥ ಅವರು 'ಪುರಂದರದಾಸರ ಕೃತಿಗಳಲ್ಲಿ ವಾತ್ಸಲ್ಯಭಾವ' ಲೇಖನದಲ್ಲಿ ಸ್ಪಷ್ಟೀಕರಿಸಿದ್ದಾರೆ. "ಇವರ ಈ ಕೀರ್ತನೆಗಳಲ್ಲಿ ವಾತ್ಸಲ್ಯಭಾವ ಹೆದ್ದೊರೆಯಾಗಿ ಹರಿದಿದೆ. ಈ ಕೀರ್ತನೆಗಳಲ್ಲಿ ಹಲವು ಅಲಂಕಾರಗಳನ್ನು ಬಳಸಿದ್ದಾರೆ. ದೃಷ್ಟಾಂತಗಳನ್ನು ನೀಡಿದ್ದಾರೆ. ಈ ರಚನೆಗಳಿಗೆ ಪುರಂದರದಾಸರ ವಿಷ್ಣುಭಕ್ತಿ ಮೂಲ ಸಾಮಗ್ರಿಯಾಗಿದೆ. ಪುರಂದರದಾಸರ ಈ ವಾತ್ಸಲ್ಯಭಾವ ಕೃತಿಗಳಲ್ಲಿ, ಅನ್ಯರಚನೆಗಳಲ್ಲಿ ಕಾಣುವ ಭಾಷಾ ಸೌಂದರ್ಯವೂ ಮಿಂಚಿದೆ"[13] ಎಂದು ಅಭಿಪ್ರಾಯಪಡುತ್ತಾರೆ.

ಕೀರ್ತನೆಗಳಲ್ಲಿ ರಸ, ವರ್ಣನೆ, ಅಲಂಕಾರಗಳನ್ನು ಕಂಡರೂ ಸಹ ಪಲ್ಲವಿ, ಅನುಪಲ್ಲವಿಗಳ ಮೂಲಕ ಶ್ರೋತೃವನ್ನು ಅರ್ಥದಕಡೆಗೆ ಸೆಳೆದರೂ ಮುಖ್ಯವಾಗಿ ಅದು ಭಾವದ ಕಡೆ ಸೆಳೆಯುತ್ತದೆ ಎಂದು ಡಾ. ಎಚ್.ಎನ್. ಮುರಳೀಧರ ಅವರು ತಮ್ಮ ಲೇಖನ 'ಹರಿದಾಸರ ನಾದಯೋಗ'ದಲ್ಲಿ ಈ ರೀತಿ ವ್ಯಕ್ತಪಡಿಸುತ್ತಾರೆ.

"ಕೀರ್ತನೆಗಳು ಸ್ವರೂಪತಃ ಮಾಹಿತಿಯನ್ನು ರವಾನಿಸಲು ಬಳಕೆಯಾಗುವ ಮಾಧ್ಯಮವಲ್ಲ. ಕೀರ್ತನೆಗೆ ಶಾಬ್ದಿಕ ಮತ್ತು ವಾಕ್ಯಾತ್ಮಕ ನೆಲೆಗಳಲ್ಲಿ ಅರ್ಥಭಾರವಿದ್ದರೂ ಅದರ ಚಲನೆ ಮಾತ್ರ ಭಾವಸನ್ನಿವೇಶದ ನಿರ್ಮಾಣದ ಕಡೆಗೆ. ವಸ್ತುವಿನ ಭಾರವನ್ನು ನಿಶ್ಚಲ ಹಾಗೂ ಚಲನಶೀಲ ಸ್ಥಿತಿಗಳಲ್ಲಿ ನಿರ್ಧರಿಸುವ ಸೂತ್ರಗಳು ಬೇರೆ ಬೇರೆಯಷ್ಟೆ. ಕೀರ್ತನೆ ಪ್ರಾಥಮಿಕವಾಗಿ ಶ್ರೋತೃವನ್ನು ಅರ್ಥದ ಕಡೆಗೆ ಸೆಳೆದರೂ ಕಡೆದೊಯ್ಯುವುದು ಮಾತ್ರ ಭಾವದ ಕಡೆಗೆ"[14]

ಕೀರ್ತನ ಸಾಹಿತ್ಯದಲ್ಲಿ ಬಹಳಷ್ಟು ಕೆಲಸ ಮಾಡಿ ಅಧ್ಯಯನದ ಮಾರ್ಗಗಳನ್ನು ಹಾಕಿಕೊಟ್ಟ ವಿದ್ಯಾರತ್ನ ರಾ.ಸ್ವಾ. ಪಂಚಮುಖಿ ಅವರು ತಮ್ಮ 'ಕರ್ನಾಟಕದ ಹರಿದಾಸ ಸಾಹಿತ್ಯ' ಕೃತಿಯಲ್ಲಿ ಹರಿದಾಸರು ಕೀರ್ತನೆಗಳಲ್ಲಿ ಬಳಸಿದ ಅಲಂಕಾರಗಳ ಕುರಿತು ವಿವರಿಸಿದ್ದಾರೆ. "ದಾಸಾರ್ಯರು ಪದ–ವಾಕ್ಯರಚನೆಗಳಲ್ಲಿ ಜನಪದ ಭಾಷೆಗೆ ಹೊಂದುವಂತೆ ಮಾರ್ಪಾಡು ಮಾಡಿಕೊಂಡಂತೆ, ಉಪದೇಶಿಸುವ ರೀತಿಯಲ್ಲಿಯೂ ಹೊಸ ಶೈಲಿಯನ್ನು ಅಂಗೀಕರಿಸಿಕೊಂಡಿದ್ದಾರೆ. ಚಿಕ್ಕ ಮಕ್ಕಳಿಂದ ಮುದುಕರವರೆಗೆ, ವೇದಗಳಲ್ಲಿ ಅನಧೀಕೃತರಾದ ಸ್ತ್ರೀ, ಶೂದ್ರ, ಬ್ರಹ್ಮ ಬಂಧುಗಳಿಂದ ಜ್ಞಾನಿವಿಪ್ರವರವರೆಗೆ ಅವರ ಉಪದೇಶಗಳು ಮುಟ್ಟುವುದರಿಂದ ಆಯಾ ಅವಸ್ಥೆಗಳಲ್ಲಿ ಅಧಿಕಾರಿಗಳ ಮನಸ್ಸಿನಲ್ಲಿ ನಡುವಂತೆ ರಸಪೋಷಕವಾದ ಶಬ್ದಾಲಂಕಾರಗಳಿಂದ ತಮ್ಮ ಭಾಷೆಯನ್ನೂ, ಶೈಲಿಯನ್ನೂ ರೂಪಿಸಿದ್ದಾರೆ. ಶಬ್ದಾಲಂಕಾರಗಳಿಂದ ಚಿತ್ರಾಲಂಕಾರಗಳೂ ವಿಶೇಷವಾಗಿ ಕಾಣುತ್ತವೆ"[15] ಎಂಬ ಇವರ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಉದ್ದೇಶಿತವಾಗಿಯೆ ಅಲಂಕಾರ, ರಸಗಳನ್ನು ಬಳಸಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಆದರೆ

ಹರಿದಾಸರು ಉದ್ದೇಶಿತವಾಗಿ ಅಲಂಕಾರಗಳನ್ನು ಬಳಸಿಯೇ ಕೀರ್ತನೆಗಳನ್ನು ರಚಿಸಿದ್ದರೆ ಎಲ್ಲಾ ಕೀರ್ತನೆಗಳಲ್ಲೂ ಅಲಂಕಾರಗಳನ್ನು ಕಾಣಬಹುದಾಗಿತ್ತು. ಇಲ್ಲಿ ಕೆಲದಾಸರ ಕೆಲವು ಕೀರ್ತನೆಗಳಲ್ಲಿ ಮಾತ್ರ ಅಲಂಕಾರಗಳ ಬಳಕೆಯನ್ನು ಕಾಣುತ್ತೇವೆ. ಅದರಲ್ಲೂ "ದಾಸರ ಕೀರ್ತನೆಗಳು ಹಾಡಲೆಂದೇ ಹುಟ್ಟಿದ್ದು ಮಾತ್ರವಲ್ಲ; ಹಾಡಿಕೊಂಡೆ ಹುಟ್ಟಿದ್ದು"[16] ಎಂಬ ಡಾ. ಎಚ್.ಎಸ್. ಮುರಳೀಧರ ಅವರ ಮಾತನ್ನು ಗಮನಿಸಿದರೆ ದಾಸರು ಉದ್ದೇಶಿತವಾಗಿ ಅಲಂಕಾರಗಳನ್ನು ಬಳಸದೆ ಹಾಡುವಾಗ ಸಾಂದರ್ಭಿಕವಾಗಿ ಅಲಂಕಾರಗಳನ್ನು ಬಳಸಿರಬಹುದು ಎಂಬುದು ನಮಗೆ ಅರ್ಥವಾಗಬೇಕಾದ ಸಂಗತಿಯಾಗಿದೆ.

ಕೀರ್ತನೆಗಳಲ್ಲಿ ಬಳಕೆಯಾದ ರಸಾಲಂಕಾರಗಳನ್ನು ಕುರಿತು ವಿವಿಧ ಅಧ್ಯಯನಕಾರರು ಗುರುತಿಸಿ ವಿವರಿಸಿದ ಬಗೆ ಇದು. ಈ ಹಿನ್ನೆಲೆಯಲ್ಲಿ ಬಹಳಷ್ಟು ಅಧ್ಯಯನಗಳು ನಡೆದಿಲ್ಲ. ಕಾರಣ ಇತರ ಸಾಹಿತ್ಯ ಪ್ರಕಾರಗಳಲ್ಲಿ ಕಂಡುಬರುವಷ್ಟು ಅಲಂಕಾರ, ರಸಗಳು ಕೀರ್ತನೆಗಳಲ್ಲಿ ಕಂಡುಬರದಿರುವುದು ಒಂದು ಕಾರಣವೆನಿಸಿದರೆ ಕೀರ್ತನೆಗಳನ್ನು ಸಾಹಿತ್ಯದ ಪ್ರಕಾರವೆಂದೆಣಿಸಿರುವುದೇ ತೀರಾ ಇತ್ತೀಚೆಗೆ. ಅದು ಕೀರ್ತನ ಸಾಹಿತ್ಯದ ಕುರಿತು ಹಲವು ಸಂಶೋಧನೆಗಳು ನಡೆಯಲು ಪ್ರಾರಂಭವಾದಾಗಿನಿಂದ. ಹಾಗಾಗಿ ಇದರ ಕುರಿತು ಅಧ್ಯಯನ ನಡೆದಿರುವುದು ಕಡಿಮೆ. ಕೀರ್ತನೆಗಳಲ್ಲಿ ಪ್ರಧಾನವಾಗಿ ಕಂಡುಬರುವುದು ಭಕ್ತಿರಸ. ಹರಿದಾಸರು ತಮ್ಮ ಭಕ್ತಿಯನ್ನು ನಿವೇದಿಸುವಾಗ ತಮ್ಮ ಅನುಭವಗಳನ್ನು ಹೇಳಿಕೊಳ್ಳುವಾಗ ಕೆಲವು ಕೀರ್ತನೆಗಳಲ್ಲಿ ಅಲಂಕಾರ ರಸಗಳನ್ನು ಬಳಸಿರುವುದನ್ನು ಕಾಣುತ್ತೇವೆ. ಆದರೆ ಶ್ರೀಕೃಷ್ಣನ ಕುರಿತ ಕೀರ್ತನೆಗಳಲ್ಲಿ ವರ್ಣನೆ, ಅಲಂಕಾರ, ರಸಗಳನ್ನು ಹೆಚ್ಚಾಗಿ ಬಳಸಿರುವುದನ್ನು ಕಂಡರೆ ದಾಸರ ಭಕ್ತಿ ಪ್ರಪಂಚದ ಅರಿವು ನಮಗಾಗುತ್ತದೆ. ಇತ್ತೀಚೆಗೆ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳು ಈ ದಿಸೆಯಲ್ಲಿ ನಡೆಯುತ್ತಿದ್ದು ಕೀರ್ತನಸಾಹಿತ್ಯದಲ್ಲಿಯೂ ಪ್ರಾಚೀನ ಕಾವ್ಯಗಳಂತೆ ರಸಾಲಂಕಾರಗಳಿರುವುದನ್ನು ಪುಷ್ಠೀಕರಿಸುತ್ತಿವೆ. ಇದುವರೆಗೂ ಪ್ರಕಟವಾದ ಕೀರ್ತನೆಗಳಲ್ಲಿ ಅಲ್ಲಲ್ಲಿ ಕಂಡುಬರುವ ರಸಾಲಂಕಾರಗಳನ್ನು ಕೆಲವು ಅಧ್ಯಯನಕಾರರು ಗುರುತಿಸಿರುವುದನ್ನು ಈ ಲೇಖನದ ಮೂಲಕ ವಿವೇಚಿಸುವ ಪ್ರಯತ್ನ ಮಾಡಲಾಗಿದೆಯಾದರೂ ಈ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ಮಾಡಬೇಕಾದ ಅಗತ್ಯವಿದೆ.

**ಅಡಿ ಟಿಪ್ಪಣಿ**

1. ಬೇಲೂರು ಕೇಶವದಾಸರು. (1944). *ಶ್ರೀ ಹರಿದಾಸ ಸಾಹಿತ್ಯ ವಿಮರ್ಶೆ.* ಹರಿಮಂದಿರ. ಪು. 176.
2. ಅದೇ. ಪು. 209.
3. ಕೃಷ್ಣಶಾಸ್ತ್ರೀ, ಎ.ಆರ್. (1945). *ಭಾಷಣಗಳು ಮತ್ತು ಲೇಖನಗಳು.* ವೆಂಕಣ್ಣಯ್ಯ. ಪು–308.
4. ರಾಮಶೇಷನ್, ನಿ.ಕೃ. (1991). *ಹರಿದಾಸ ಆಂದೋಲನ: ಒಂದು ಅಧ್ಯಯನ.* ತಿರುಪತಿ ತಿರುಮಲ ದೇವಸ್ಥಾನ. ಪು. 204.
5. ಅದೇ. ಪು. 458.
6. ಶ್ರೀ ಪ್ರಹ್ಲಾದಾಚಾರ್ಯ ಜೋಷಿ. (1983, ಜನವರಿ). ದಾಸಸಾಹಿತ್ಯದಲ್ಲಿ ಶೃಂಗಾರ. *ಸಪ್ತಗಿರಿ.* ಪು. 15.
7. ಅದೇ ಪು. 25.
8. ಸರ್ವೋತ್ತಮನ್, ಕೆ. (1982). ದಾಸರ ಕೃತಿಗಳಲ್ಲಿ ಶ್ರೀರಾಮ. *ಸಪ್ತಗಿರಿ.* ಪು. 17.
9. ಶ್ರೀ ಪ್ರಾಣೇಶ ಗುಡಿ.. (1982, ನವೆಂಬರ್). ಪುರಂದರದಾಸರ ಹಾಡುಗಳಲ್ಲಿ ಹಾಸ್ಯ. *ಸಪ್ತಗಿರಿ.* ಪು.7.
10. ಶ್ರೀ ಚಿಂಚೋಳಿ ಪ್ರಹ್ಲಾದಾಚಾರ್ಯ. (1985, ನವೆಂಬರ್). ಶ್ರೀ ವಿಜಯದಾಸರು. *ಸಪ್ತಗಿರಿ.* ಪು. 27.

11. ಶ್ರೀ ಕೂಡಲಿ ಜಗನ್ನಾಥಶಾಸ್ತ್ರೀ. (1986, ಜನವರಿ). ಅಜ್ಞಾತ ದಾಸಶ್ರೇಷ್ಠ ಪರಮದೇವ. *ಸಪ್ತಗಿರಿ.* ಪು. 33.
12. ಹಯವದನ ಆಚಾರ್ಯ, ಉ.ಲ. (1986, ಮಾರ್ಚ್). ವಾದಿರಾಜರ ಕೀರ್ತನೆಗಳಲ್ಲಿ ಮಧುರಭಾವ. *ಸಪ್ತಗಿರಿ.* ಪು. 9.
13. ಗೋಕುಲನಾಥ. ಕೆ. (1987, ಜನವರಿ). ಪುರಂದರದಾಸರ ಕೃತಿಗಳಲ್ಲಿ ವಾತ್ಸಲ್ಯಭಾವ. *ಸಪ್ತಗಿರಿ.* ಪು. 28.
14. ಮುರಳೀಧರ, ಎಚ್.ಎನ್. (2018, ಜನವರಿ). ಹರಿದಾಸರ ನಾದಯೋಗ. *ವಿವೇಕಪ್ರಭ.* ಪು. 48.
15. ವಿದ್ಯಾರತ್ನ ರಾ.ಸ್ವಾ. (2008). ಪಂಚಮುಖಿ. ಕರ್ನಾಟಕದ ಹರಿದಾಸರು. ಪು.271.
16. ಮುರಳೀಧರ, ಎಚ್.ಎನ್. (2018, ಜನವರಿ). ಹರಿದಾಸರ ನಾದಯೋಗ. *ವಿವೇಕಪ್ರಭ.* ಪು. 48.

**ಪರಾಮರ್ಶನ/ಆಧಾರ ಗ್ರಂಥಗಳು**

- ಬಸವರಾಜ ಸಬರದ. (2002). *ಪುರಂದರದಾಸರ ಆಯ್ದ ಕೀರ್ತನೆಗಳು.* ಬಂಜಾರ ಪ್ರಕಾಶನ,
- ಪಾವಂಜೆ ಗುರುರಾವ್. (1925). *ದಾಸರ ಪದಗಳು : ಪುರಂದರದಾಸರ ಕೀರ್ತನೆಗಳು ಭಾಗ–1 ರಿಂದ 5.* ಶ್ರೀಕೃಷ್ಣ ಮುದ್ರಣಾಲಯ.
- ಸತ್ಯನಾರಾಯಣರಾವ್ ಹೊ.ರಾ. (2003). *ಕನಕದಾಸರ ಜನಪ್ರಿಯ ಕೀರ್ತನೆಗಳು.* ಅಂಕಿತ ಪುಸ್ತಕ.
- ಸುಬೋಧ ರಾಮರಾವ್. (1928). *ಹರಿದಾಸ ಕೀರ್ತನ ತರಂಗಿಣಿ.* ಸುಬೋಧ ಪ್ರಕಟಣಾಲಯ.